ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 07-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನಿಪಿ 88 ರ ಪ್ರಕಾರ ಐಟಂ ನಂ 4 ರ ಒಂದನೇ ಅಂತಸ್ತಿನ ಮೇಲೆ ಇರುವ ಟೆರೆಸ್ portion ನ್ನು ಮತ್ತು 2 ನೇ ಮಹಡಿ ಕಟ್ಟಿಸುವ ಹಕ್ಕನ್ನು ಉಳಿಸಿಕೊಂಡು ಒಂದನೇ ಪ್ರತಿವಾದಿ ನನ್ನ ಅಣ್ಣ 1/3 ಅಂಶದ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸಾಕ್ಷಿ 3 ಜನ ಸೇರಿ ಖರೀದಿಸಿರುತ್ತೇವೆ ಎಂದು ತಿಳಿಸಿರುತ್ತಾರೆ. ಬೇರೆ ಬೇರೆ ಕ್ರಯಪತ್ರದ ಅಡಿ ತೆಗೆದುಕೊಂಡಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೆನಪಿಲ್ಲ ಎಂದು ತಿಳಿಸಿರುತ್ತಾರೆ . ಪ್ರತಿ ಕ್ರಯಪತ್ರದ ಪ್ರತಿಫಲದ ಮೌಲ್ಯ ರೂ 2,80,000 ಎಂದರೆ ಸಾಕ್ಷಿ ಆ ರೀತಿ ಕ್ರಯಪತ್ರದಲ್ಲಿ ತೋರಿಸಿದ್ದಾರೆ ಆದರೇ ನಾವು ಬಿಲ್ಡರ್ ಗೆ 30 ಲಕ್ಷ ಹಣವನ್ನು ಸಾಲ ಕೊಟ್ಟಿದ್ದೆವು ಅವರು ವಾಪಸ್ಸು ಕೊಡಲಿಲ್ಲ. ಆದ್ದರಿಂದ ನಾವು ಅದನ್ನು ಅವರಿಂದ ಕ್ರಯಪತ್ರದಲ್ಲಿ ಕಡಿಮೆ ಹಣ ತೋರಿಸಿ ಖರೀದಿಸಿದ್ದೇವೆ ಎಂದು ತಿಳಿಸಿರುತ್ತಾರೆ . ನಮ್ಮ ವಾದಪತ್ರದಲ್ಲಿ 30 ಲಕ್ಷ ಹಣವನ್ನು ಬಿಲ್ಡರ್ ಗೆ ಕೊಟ್ಟಿದ್ದೆವು ಅವರು ವಾಪಸ್ಸು ಕೊಡದೇ ಇದ್ದರಿಂದ ಐಟಂ ನಂ 4 ನ್ನು ಖರೀದಿಸಲಾಗಿದೆ ಎಂದು ಹೇಳಿಲ್ಲ . ಒಂದನೇ ಪ್ರತಿವಾದಿ ನಿಮ್ಮ ಅಣ್ಣನಿಗೆ ಕೆನರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಯಲ್ಲಿ Sathya sai Multi speciality hospital ಹೆಸರಿನಲ್ಲಿ ಖಾತೆ ಇತ್ತು ಎಂದರೆ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರಿದು ಎಲ್ಲವನ್ನು ಅವರೇ ನೋಡಿಕೊಳ್ಳುತಿದ್ದರು ಮತ್ತು joint ಆಗಿ

ಮಾಡಲಾಗಿತ್ತು ಎಂದು ತಿಳಿಸಿರುತ್ತಾರೆ. 17-08-2002 ರಂದು ಕೆನರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಖಾತೆಗೆ ತಲಾ 2,80,000 ಯಂತೆ ಜಮೆಯನ್ನು ಒಂದನೇ ಪ್ರತಿವಾದಿ ನನ್ನ ಅಣ್ಣ ಮಾಡಿದ್ದರು ಎಂದರೆ ಸಾಕ್ಷಿ ಮಾಡಿರಬಹುದು ನನಗೆ ಗೊತ್ತಿಲ್ಲ . ಕೆನರಾ ಬ್ಯಾಂಕ್ ಶಾಖೆಯಲ್ಲಿ ನನ್ನ ಅಣ್ಣನ ಖಾತೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಕೆನರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ನ ಹಣವನ್ನು ಕೆನರಾ ಟೌನ್ ಬ್ಯಾಂಕ್ ಗೆ ವರ್ಗಾವಣೆ ಮಾಡಿ ಅಲ್ಲಿಂದ ತಲಾ 2,80,000 ದಂತೆ 3 ಡಿಡಿಗಳನ್ನು ತೆಗೆದುಕೊಂಡು ಕ್ರಯಕ್ಕೆ ಕೊಟ್ಟವರಿಗೆ ಪ್ರತ್ಯೇಕವಾಗಿ ಕೊಡಲಾಗಿದೆ ಎಂದರೆ ಸಾಕ್ಷಿ ಮನೆಯ ಹಣವನ್ನೇ ಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ ಈ ಬಗ್ಗೆ ಪಾಸ್‌ಬುಕ್ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಇದೇ ಮೊದಲ ಬಾರಿಗೆ ನೋಡುತಿದ್ದೇನೆ ಎಂದು ತಿಳಿಸಿರುತ್ತಾರೆ. ಆ ಸಮಯದಲ್ಲಿ ಜಾಗದ ಮಾರಾಟಗಾರನು ಕೆಎಸ್ ಎಫ್ ಸಿ ನಿಂದ ಸಾಲ ವನ್ನು ಪಡೆದು ಕೆಎಸ್‌ಎಫ್‌ಸಿ ಗೆ ಅಡಮಾನ ಮಾಡಿದ್ದರು ಎಂದರೆ ಸರಿ . ಈ ಪ್ರತಿಫಲದ ಹಣದಿಂದ ಕೆಎಸ್ ಎಫ್‌ಸಿ ಸಾಲವನ್ನು ಮಾರಾಟಗಾರನು ಮುಕ್ತಾಯ ಮಾಡಿದನು ಎಂದರೆ ಇದೇ ಮೊದಲ ಬಾರಿಗೆ ನೋಡುತಿದ್ದೇನೆ ಎಂದು ಸಾಕ್ಷಿ ದಾಖಲೆ ತೋರಿಸಿದಾಗ ಹೇಳುತ್ತಾರೆ . ನನ್ನ ಅಜ್ಜಿ ಕಾಶಮ್ಮನಿಗೆ ಅಲ್ಲಿ ಕಣ್ಣಿನ ಆಸ್ಪತ್ರೆ ತೆರೆಯಬೇಕು ಎಂಬ ಆಸೆ ಇತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ 1999 ರಲ್ಲಿ ಕಾಶಮ್ಮ ಡಿ ವಿ ಲಕ್ಷ್ಮೀನಾರಾಯಣ ಎನ್ನುವವರಿಗೆ 5 ಲಕ್ಷ ಸಾಲ ಕೊಟ್ಟು ಅವರಿಂದ On demand promissory note ಪಡೆದಿದ್ದರು ಎಂದರೆ ಸಾಕ್ಷಿ ನನ್ನ ಅಜ್ಜಿ ಏನೂ ಮಾಡಿರಲಿಲ್ಲ ಎಲ್ಲವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ demand promissory note ನ್ನು

ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ನಾನು ಇದೇ ಮೊದಲ ಬಾರಿಗೆ ಇದನ್ನು ನೋಡುತಿದ್ದೇನೆ ಎಂದು ಸಾಕ್ಷಿ ತಿಳಿಸಿರುತ್ತಾರೆ . 15-08-2002 ರಲ್ಲಿ ಕಾಶಮ್ಮ 5,75,000 ಹಣವನ್ನು ಒಂದನೇ ಪ್ರತಿವಾದಿ ನಿಮ್ಮ ಅಣ್ಣನಿಗೆ ದಾನಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ಸಾಕ್ಷಿಗೆ ಈ ಬಗ್ಗೆ ದಾನಪತ್ರ ಎಂದು ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನಾನು ಒಪ್ಪುವುದಿಲ್ಲ ಎಂದು ತಿಳಿಸಿರುತಾರೆ. ಕಾಶಮ್ಮ ಕೊಟ್ಟಿರುವ 5,75,000 ಹಣದಿಂದ ಮತ್ತು ಒಂದನೇ ಪ್ರತಿವಾದಿ ನಿಮ್ಮ ಅಣ್ಣನ ಸ್ವಂತ ಸಂಪಾದನೆಯಿಂದ ಐಟಂ ನಂ 4 ರ ಸ್ವತ್ತನ್ನು ಖರೀದಿಸಲಾಗಿದೆ  ಎಂದರೆ ಸರಿಯಲ್ಲ.  ಆ ರೀತಿ ಖರಿದಿಸಿದ ನಂತರ ಆ ಜಾಗದಲ್ಲಿ 2 ನೇ ಅಂತಸ್ತನ್ನು ಕಟ್ಟಲಾಗಿದೆ ಎಂದರೆ ಮನೆ ಹಣದಿಂದ ನಾವು 3 ಜನ ಕಟ್ಟಿಸಿರುತ್ತೇವೆ ಎಂದು ತಿಳಿಸಿರುತ್ತಾರೆ . ಸದರಿ ಅಂತಸ್ತನ್ನು ಕಟ್ಟಿಸಲು ಎಷ್ಟು ಖರ್ಚು ಆಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕಟ್ಟಲು ಮತ್ತು ಯಂತ್ರೋಪಕರಣಗಳು ಸೇರಿ ಒಟ್ಟು 45 ಲಕ್ಷ ಖರ್ಚು ಆಗಿರುತ್ತದೆ ಎಂದು ತಿಳಿಸಿರುತಾರೆ . ಸದರಿ ಕಟ್ಟಡ ಕಟ್ಟಲು ನಾನು ಹೇಳುವಂತೆ ಕುಟುಂಬದ ಯಾವ ಹಣ ಮತ್ತು ಅದರ ಮೂಲ ಯಾವುದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಅಪಾರ್ಟ್ ಮೆಂಟ್ ಮಾರಾಟ ಮಾಡಿದ ಹಣ ಮತ್ತು ಅದರಿಂದ ಬಾಡಿಗೆ ಬರುತಿತ್ತು ಮತ್ತು ಶೇರ್ ವ್ಯವಹಾರದಿಂದ ಹಣ ಬರುತಿತ್ತು, ಸೊಸೈಟಿಯಲ್ಲಿ ಮನೆಯ ಹಣವನ್ನು ಇಡುತಿದ್ದರು ಅದರಿಂದ ಬಡ್ಡಿ ಬರುತಿತ್ತು ಆ ಹಣದಿಂದ ಕಟ್ಟಲಾಗಿದೆ ಎಂದು ತಿಳಿಸಿರುತ್ತಾರೆ. ನಿಮ್ಮ ತಾಯಿ ಸಲ್ಲಿಸಿದ ಐಟಿ ರಿಟನ್ಸ್ ನಲ್ಲಿ ಅಪಾರ್ಟ್ ಮೆಂಟ್ ಮಾರಾಟ ಮಾಡಿದಾಗ ಬಂದ ಹಣವನ್ನು ಐಟಂ ನಂ 4 ರ ಸ್ವತ್ತಿನಲ್ಲಿ ಕಟ್ಟಡ ಕಟ್ಟಲು ಉಪಯೋಗಿಸಲಾಗಿದೆ ಎಂದು ಕಾಣಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಎಲ್ಲವನ್ನು

ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . ನಿಮ್ಮ ಐಟಿ ರಿಟನ್ಸ್ ನಲ್ಲಿ ಅಪಾರ್ಟ್ ಮೆಂಟ್ ಮಾರಾಟ ಮಾಡಿದಾಗ ಬಂದ ಹಣವನ್ನು ಐಟಂ ನಂ 4 ರ ಸ್ವತಿನಲ್ಲಿ ಕಟ್ಟಡ ಕಟ್ಟಲು ಉಪಯೋಗಿಸಲಾಗಿದೆ ಎಂದು ಕಾಣಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಲ್ಲವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . ನಾನು ಈ ದಾವೆ ಹಾಕುವ ಮೊದಲು ನನ್ನ ಮತ್ತು ನನ್ನ ತಾಯಿಯ ಐಟಿ ರಿಟನ್ಸ್ ನ್ನು ಪರಿಶೀಲನೆ ಮಾಡಿಲ್ಲ . ಅಪಾರ್ಟ್ ಮೆಂಟ್ ಮಾರಾಟ ಮಾಡಿದ ಹಣದಿಂದ ಐಟಂ ನಂ 4 ರ ಕಟ್ಟಡ ಕಟ್ಟಲಾಗಿದೆ ಎಂದು ತೋರಿಸಲು ಏನಾದರೂ ಆದಾರ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕಟ್ಟಡ ಕಟ್ಟಿರುವುದೇ ಆದಾರ ಎಂದು ತಿಳಿಸಿರುತ್ತಾರೆ . ಒಂದನೇ ಪ್ರತಿವಾದಿ ನನ್ನ ಅಣ್ಣನ ಹೆಸರಿನಲ್ಲಿ ಪರವಾನಿಗೆ ಪಡೆದು Sathyasai Eye Hospital ಐಟಂ ನಂ 4 ರ ಸ್ವತ್ತಿನಲ್ಲಿ ಕಟ್ಟಲಾಗಿದೆ ಎಂದರೆ ನಮ್ಮೆಲ್ಲರ ಪರವಾಗಿ ಅವರ ಹೆಸರಿನಲ್ಲಿ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ . ದಾಖಲೆಗಳ ಪ್ರಕಾರ Sathyasai Eye Hospital ನ proprietor ನನ್ನ ಅಣ್ಣ ಎಂದರೆ ಸಾಕ್ಷಿ ಆ ರೀತಿ ದಾಖಲೆ ಮಾಡಿದ್ದಾರೆ ಎಂದು ತಿಳಿಸಿರುತಾರೆ .

**ಈ ಹಂತದಲ್ಲಿ ಮುಂದುವರಿದು ಪಾಟೀ ಸವಾಲಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.

ಒ.ಎಸ್.  - 34/2020

ಪಿ.ಡಬ್ಲ್ಯು - 01